ಶ್ರೀ ಜೆ. ಎಚ್. ಕಟ್ಟಾಡಿ.—ಸ್ವಾಮಿ (ಅ) ಪ್ರಶ್ನೆಗೆ ಉತ್ತರವಾಗಿ ನಿಜವಲ್ಲ ಎಂದು ತಿಳಿಸಿದ್ದೀರಿ. ಹೈಕೋರ್ಟ್ ಮುಂದೆ ಸರ್ಕಾರಿ ವಕೀಲರು ಇದರ ಬಗ್ಗೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ತಯಾರಾಗಿದ್ದರೂ ಕೂಡ, ನೇಮಕಾತಿ ಮಾಡುವುದರ ಬಗ್ಗೆ ಕೋರ್ಟಿನಲ್ಲಿ ರಿಟ್ ಇರುವುದರಿಂದ ನಾವು ಮಾಡಲಿಲ್ಲ ಎಂದು ತಮ್ಮ ವಾದವನ್ನು ಹೇಳಿರುವುದು ನಿಜವೇ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕೋರ್ಟಿನಲ್ಲಿ ರಿಟ್ ಇರುವುದರಿಂದ ಮತ್ತು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಆಗದೇ ಇರುವುದರಿಂದ ಅವರು ಆ ರೀತಿ ಹೇಳಿದ್ದಾರೆ,

ಶ್ರೀ ಜೆ. ಎಚ್. ಕಟ್ಟಾಡಿ.—ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಿದ್ದೇವೆ ಎಂದು ಹೇಳಿರುವುದು ನಿಜವಲ್ಲ ಎಂದು ಹೇಳಿದ್ದೀರಿ. ನನ್ನ ಹತ್ತಿರ ಹೈಕೋರ್ಟಿನ ಒಂದು ಪ್ರತಿ ಇದೆ. ಅದನ್ನು ಅಧ್ಯಕ್ಷರ ಮುಖಾಂತರ ತಮಗೆ ಕೊಡುತ್ತೇನೆ. ಅದರ ಬಗ್ಗೆ ಇರುವ ವಿವರಗಳನ್ನೆಲ್ಲಾ ನೋಡಿಕೊಂಡು ನನಗೆ ಇನ್ನೊಮ್ಮೆ ಅದರ ವಿವರಗಳನ್ನು ತಿಳಿಸಬೇಕಾಗಿ ಪ್ರಾರ್ಥಿಸುತ್ತೇನೆ.

(ಅದರ ಕಾಪಿಯನ್ನು ಅಧ್ಯಕ್ಷರಿಗೆ ಕಳುಹಿಸಿಕೊಟ್ಟರು)

* *Construction of L.F. Dispensary building at Tavarekere Taluk*

141. Sri T. TARE GOWDA (Kallambella).—

Will the Minister for Health be pleased to state :—

(*a*) whether it is not a fact that the L.F. Dispensary building at Tavarekere Taluk collapsed during May, 1973, on account of heavy rains ;

(*b*) whether the Minister for Health had assured that a new building will be constructed by Government during 1974-75 since the Dispensary is being utilised by about 25 surrounding villages in Sira Taluk.

(*c*) if so, whether the amount required for the construction of the L.F. Dispensary building at Tavarekere, Sira Taluk has been released by the Government ?

Sri H. SIDDAVEERAPPA (Minister for Health).—

(*a*) Yes.

(*b*) Yes.

(*c*) Not yet.

ಶ್ರೀ ಟಿ. ತಾರೇಗೌಡ.—ಸ್ವಾಮಿ, ಈ ಪ್ರಶ್ನೆಯ (ಅ)ಗೆ ಉತ್ತರವಾಗಿ ನಿಜ ಎಂದು ಹೇಳಿದ್ದೀರಿ. ಮತ್ತು ಆ ಕಟ್ಟಡವನ್ನು 1974-75ನೇ ಸಾಲಿನಲ್ಲಿ ಕಟ್ಟಿಸಿಕೊಡುತ್ತೇವೆ ಎಂದು ಮಾನ್ಯ ಆರೋಗ್ಯ ಮಂತ್ರಿಗಳು ಭರವಸೆ ನೀಡಿದ್ದರೂ ಕೂಡ ಇನ್ನೂ ಆ ಕಟ್ಟಡ ಆಗಿಲ್ಲ. ಮತ್ತು ಈ ಬಗ್ಗೆ ಫೈನಾನ್ಸ್ ಡಿಪಾರ್ಟ್‌ಮೆಂಟಿನವರನ್ನು ಹಣ ಕೇಳಿದರೂ ಇನ್ನೂ ಬಂದಿಲ್ಲ ಎಂದು ಹೇಳಿದರೆ ಮಾನ್ಯ ಆರೋಗ್ಯ ಮಂತ್ರಿಗಳ ಬೇಡಿಕೆಗೆ ಅವರು ಗೌರವ ಕೊಡುವುದಿಲ್ಲವೇ?

† ಶ್ರೀ ಎಚ್. ಸಿದ್ದವೀರಪ್ಪ.—ಇದು ಗೌರವದ ಪ್ರಶ್ನೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ನಾನು ಕೇಳಿರುವುದರಲ್ಲಿ ಇದಕ್ಕೆ ಒಂದು ಲಕ್ಷ 52 ಸಾವಿರ ರೂಪಾಯಿ ಎಸ್ಟಿಮೇಟ್ ಆಗಿದೆ ಎಂದು. ಈ ಕಟ್ಟಡ ಅವಶ್ಯಕವಾಗಿ ಆಗಬೇಕಾದ್ದೇ. ಈ ಕಟ್ಟಡ ಮಳೆ ಬಂದು ಬಿದ್ದು ಹೋಗಿದೆ. ಇದು ಬಹಳ ದೊಡ್ಡ ಊರು, ಅಲ್ಲಿ ಆಸ್ಪತ್ರೆ ಇಲ್ಲದೆ ಹೋದರೆ ಜನರಿಗೆ ತೊಂದರೆಯಾಗುತ್ತದೆ ಎನ್ನುವುದು ನನಗೂ ಗೊತ್ತಿದೆ. ಆದುದರಿಂದ ನಾನು ಎಕ್ಸಿಕ್ಯೂಟೀವ್ ಇಂಜಿನೀಯರ್‌ಸ್ ಈ

ಬಗ್ಗೆ ಕೂಡಲೇ ಒಂದು ಎಸ್ಟಿಮೇಟ್ ಮಾಡಿ ಅದರ ಪ್ಲಾನ್‌ನನ್ನು ಕಳುಹಿಸಬೇಕು ಎಂದು ಹೇಳಿದ್ದೇನೆ. ಮತ್ತು ಅದನ್ನು 1974–5ನೇ ಸಾಲಿನ ಬಡ್ಜೆಟ್ ಎಸ್ಟಿಮೇಟ್‌ನಲ್ಲಿ ಸೇರಿಸಬೇಕು ಎಂದು ಹೇಳಿದ್ದೇನೆ. ಆ ರೀತಿ ಆಗದೇಹೋದರೆ ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಾದರೂ ಸೇರಿಸಿ ಅದನ್ನು ಮಾಡಿಸಿ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ. ತಾರೇಗೌಡ.—ಈ ವರ್ಷದಲ್ಲಾದರೂ ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಸ್ವಾಮೀ?

ಶ್ರೀ ಎಚ್. ಸಿದ್ದವೀರಪ್ಪ.—ನಾವೂ ನೀವೂ ಇಬ್ಬರು ಕೂಡಿ ಈ ವರ್ಷವೇ ಆಗುವುದಕ್ಕೆ ಪ್ರಯತ್ನ ಮಾಡೋಣ.

* *Underground Drainage work at Jamkhandi*

185. Sri P. M. BANGI (Jamkhandi) .—

Will the Minister for Law and Municipal Administration be pleased to state :—

(*a*) whether the underground drainage work is undertaken by the Town Municipal Council, Jamkhandi through the Assistant Engineer, P.H.E., Jamkhandi ;

(*b*) if so, when the said drainage work was started ;

(*c*) the reasons for not completing the drainage work by the contractor till now ;

(*d*) the terms of contract ;

(*e*) whether the Assistant Engineer, P.H.E., Jamkhandi is insisting the contractor to fulfill the terms of contract ;

(*f*) whether the Town Municipal Council, Jamkhandi bears the entire expenditure on the underground drainage work ;

(*g*) the reasons for not supplying the T.M.C., Jamkhandi with the copies of.—

(i) the estimates of the drainage work ;

(ii) the tender that is accepted by the P.H.E., Department, and ;

(iii) the terms of contract with the contractor Narayan ;

3

(*h*) the reasons for not repairing and bringing to their former position the main roads and side lanes in the town where drainage work is completed ?